ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್-103, ಕಾವೇರಿಪುರ

ವಾರ್ಡ್ ಸಮಿತಿ ಸಭೆಯ ನಡವಳಿಗಳು

ದಿನಾಂಕ: 05.12.2020

1. ಸ್ವಾಗತ ಭಾಷಣ
2. ವಾರ್ಡ್ ಕಮಿಟಿ ಸಭೆಗೆ ಹಾಜರಿದ್ದ ನೋಡಲ್ ಅಧಿಕಾರಿ ಮತ್ತು ಅಧಿಕಾರಿಗಳು ಹಾಗೂ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.
3. ವಾರ್ಡ್ ಸಮಿತಿ ಸಭೆಗೆ ಎಲ್ಲಾ ಅಧಿಕಾರಿಗಳು ಹಾಜರಾಗದ ಕಾರಣ ಮುಂದಿನ ಸಭೆಗೆ ಸೂಕ್ತ ಸಮಯವನ್ನು ನಿಗದಿಪಡಿಸಿ(ಮಧ್ಯಾಹ್ನ 12.30 ಗಂಟೆಗೆ) ಎಲ್ಲಾ ಅಧಿಕಾರಿಗಳು ಹಾಜರಾಗುವಂತೆ ಸಭೆಯಲ್ಲಿ ತಿಳಿಸಿದರು.
4. ವಾರ್ಡ್-103 ಕಾವೇರಿಪುರ ಪ್ರದೇಶದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಾರ್ವಜನಿಕ ಶೌಚಾಲಯ ನಿರ್ಮಿಸಲು ಬೃಬೆಂ.ಮ.ಪಾ ವತಿಯಿಂದ ಆದೇಶವಾಗಿದ್ದು, ಸ್ಥಳವನ್ನು ಗುರುತಿಸಿ ತಿಳಿಸಲು ಮಾನ್ಯ ಆಯುಕ್ತರು ಆದೇಶ ನೀಡಿರುತ್ತಾರೆ. ಮೇಲ್ಕಂಡ ಆದೇಶದಂತೆ 1. 60 ಅಡಿರಸ್ತೆ ಶ್ರೀನಿವಾಸನಗರ ಬಳಿ ಇರುವ ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ ಮೋರಿಯ ಮೇಲೆ, 2. 60 ಅಡಿರಸ್ತೆ, ಪ್ರಶಾಂತನಗರ ವಿಷ್ಣುವರ್ಧನ ಪಾರ್ಕ್ ಹತ್ತಿರ ಮಾಗಡಿ ಮುಖ್ಯರಸ್ತೆ ಸಿಂಡಿಕೇಟ್ ಬ್ಯಾಂಕ್ ಕಾಲೋನಿ ಹತ್ತಿರ, 3. ಪೂಜಾ ಕಲ್ಯಾಣ ಮಂಟಪ ಹತ್ತಿರ ಸಾರ್ವಜನಿಕ ಶೌಚಾಲಯ ಮಾಡಲು ಸಭೆಯಲ್ಲಿ ಪ್ರಸ್ತಾಪವನ್ನು ಸಲ್ಲಿಸಿರುತ್ತಾರೆ. ವಾರ್ಡ್ 103ರ ಸಹಾಯಕ ಅಭಿಯಂತರರು ಸದರಿ ಸ್ಥಳವನ್ನು ಪರಿಶೀಲಿಸಿ ಶೌಚಾಲಯ ನಿರ್ಮಿಸಲು ಸೂಕ್ತವಾಗಿರುವುದು ಕಂಡುಬಂದಲ್ಲಿ ಅಥವಾ ಈ ಸ್ಥಳಗಳೊಂದಿಗೆ ಬೇರೆ ಸ್ಥಳಗಳು ಶೌಚಾಲಯ ನಿರ್ಮಿಸಲು ಸೂಕ್ತವಾಗಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ, ಲಿಖಿತವಾಗಿ ವರದಿಯನ್ನು ತಮ್ಮ ಬಟವಾಡೆ ಅಧಿಕಾರಿಗಳ ಮೂಲಕ ಮೇಲಧಿಕಾರಿಗಳಿಗೆ ಸಲ್ಲಿಸಲು ಸೂಚಿಸಲಾಯಿತು.
5. ಕೋವಿಡ್-19 ಇರುವ ಕಾರಣ ಸಾರ್ವಜನಿಕ ಪ್ರದೇಶದಲ್ಲಿ ಮಾಸ್ಕ್ ಹಾಕದೇ ಇರುವ ವ್ಯಕ್ತಿಗಳಿಗೆ ದಂಡ ವಸೂಲಿ ಮಾಡಲು ಹಾಗೂ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸ ಹಾಕುತ್ತಿರುವವರ ಬಗ್ಗೆ ಸಹ ದಂಡ ವಿಧಿಸಲು ಮಾರ್ಷಲ್‌ಗಳಿಗೆ ತಿಳಿಸಲಾಯಿತು. ಪೆಟ್ರೋಲಿಂಗ್ ಕಾರ್ಯದ ಫೋಟೋಗಳನ್ನು ವಾಟ್ಸಪ್ ಗ್ರೂಪ್‌ನಲ್ಲಿ ಹಾಕಲು ಸೂಚಿಸಲಾಯಿತು
6. ಕಾವೇರಿಪುರ ವಾರ್ಡ್ ಬಿ.ಡಿ.ಎ ಬಡಾವಣೆಯಲ್ಲಿ ಮತ್ತು ಇತರ ಸ್ಥಳಗಳಲ್ಲಿ ಬೀದಿ ದೀಪಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂದು ಶ್ರೀ.ಸಿದ್ದರಾಜು ರವರು ಸಭೆಯಲ್ಲಿ ತಿಳಿಸಿದರು. ಕಳೆದ ವಾರ್ಡ್ ಕಮಿಟಿಯ ಸಭೆಗಳಿಗೆ ವಾರ್ಡ್‌ನ ಸಹಾಯಕ ಅಭಿಯಂತರರು (ವಿದ್ಯುತ್) / ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆದಾರರಾಗಲೀ ಅಥವಾ ಇತರೆ ಯಾವುದೇ ಅಧಿಕಾರಿಗಳು ಸಭೆಗೆ ಹಾಜರಾಗದೆ ಇರುವುದರಿಂದ ಬೀದಿದೀಪಗಳ ದೂರಿನ ಬಗ್ಗೆ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿರುವುದಿಲ್ಲ. ಮುಂದಿನ ಸಭೆಗೆ ತಪ್ಪದೇ ಸಂಬಂಧಪಟ್ಟವರು ಹಾಜರಾಗಲು ತಿಳಿಸುತ್ತಾ ತಪ್ಪಿದ್ದಲ್ಲಿ ಮೇಲಧಿಕಾರಿಗಳಿಗೆ ವರದಿಯನ್ನು ಸಲ್ಲಿಸಲಾಗುವುದು.

Scanned with CamScanner

7. ಪಟ್ಟೇಗಾರಪಾಳ್ಯ ಮುಖ್ಯರಸ್ತೆಯಲ್ಲಿನ ಕನಕನಗರ ಹತ್ತಿರ ಇರುವ ವೃಷಭಾವತಿ ನಾಲೆಯು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ಮತ್ತು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಪರ್ಕ ಸೇತುವೆಯ ಮೋರಿಯ ಮೇಲೆ ನಿರ್ಮಿಸಿರುವ ಸೇತುವೆಯು ತುಂಬಾ ಶಿಥಿಲವಾಗಿದ್ದು, ಸೇತುವೆಯ ಮೇಲಿನ ಕಂಬಿಗಳು ಮೇಲೆ ಎದ್ದಿರುವುದರಿಂದ ಸದರಿ ಸೇತುವೆಯ ಮೇಲೆ ಓಡಾಡುವ ವಾಹನಗಳು ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಹಾಗೂ ಮುಂದೆ ಆಗುವ ಅನಾಹುತಗಳನ್ನು ತಡೆಯುವ ಸಲುವಾಗಿ ಅದನ್ನು ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರದ ಮೂಲಕ ತಿಳಿಸಲು ವಾರ್ಡ್‌ನ ಸಹಾಯಕ ಅಭಿಯಂತರರು ರವರಿಗೆ ಸೂಚಿಸಿದೆ.
8. ಎಸ್.ಡಬ್ಲ್ಯೂ.ಡಿ ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಹಾಜರಾಗದೆ ಇರುವುದರಿಂದ ಮುಂದಿನ ಸಭೆಗೆ ತಪ್ಪದೆ ಹಾಜರಾಗಲು ಪತ್ರದ ಮುಖೇನ ತಿಳಿಸಲು ಕೋರಿದರು
9. ವಾರ್ಡ್–103 ಕಾವೇರಿಪುರ ಪ್ರದೇಶದಲ್ಲಿ ಕೋವಿಡ್–19 ಸಾಂಕ್ರಮಿಕ ರೋಗಕ್ಕೆ ಸಂಬಂಧಪಟ್ಟಂತೆ ಸ್ಯಾನಿಟೈಜೇಷನ್ ಕೆಲಸವನ್ನು ಶ್ರೀ.ಜಗದೀಶ್ (ಗುತ್ತಿಗೆದಾರರು) ರವರು ಕೆಲಸ ನಿರ್ವಹಿಸಲು ವಹಿಸಿರುವವರು ಪ್ರಸ್ತುತ ಕಾರ್ಯನಿರ್ವಹಿಸದೆ ಇರುವುದರಿಂದ ಕೂಡಲೇ ಆರೋಗ್ಯ ವೈದ್ಯಾಧಿಕಾರಿ(ಗೋವಿಂದರಾಜನಗರ) ರವರು ಪರಿಶೀಲಿಸಿ, ಸ್ಯಾನಿಟೈಜೇಷನ್ ಮಾಡಲು ಕ್ರಮವಹಿಸಲು ಆದೇಶಿಸಿದರು.
10. ವಾರ್ಡ್–103 ಕಾವೇರಿಪುರ ಪ್ರದೇಶದ ರಸ್ತೆಗಳಲ್ಲಿ ಅನೇಕ ಬೀದಿಗಳಲ್ಲಿ ಹಳ್ಳ-ಗುಂಡಿಗಳು ಇರುವುದರಿಂದ ಕೂಡಲೇ ವಾರ್ಡ್‌ನ ಸಹಾಯಕ ಅಭಿಯಂತರರು ಬಿದ್ದಿರುವ ಹಳ್ಳ/ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಳ್ಳುವುದು.
11. ಸದರಿ ವಾರ್ಡ್‌ನಲ್ಲಿರುವ ಅನೇಕ ಬೋರ್‌ವೆಲ್‌ಗಳು ಕಾರ್ಯನಿರ್ವಹಿಸದೆ ಇದ್ದು, ಮತ್ತು ಬೋರ್‌ವೆಲ್‌ಗಳ ಬಗ್ಗೆ ಅನೇಕ ದೂರುಗಳಿರುವುದರಿಂದ ಗುತ್ತಿಗೆದಾರರಾದ ಶ್ರೀ.ಪ್ರಸಾದ್‌ರವರನ್ನು ಮುಂದಿನ ಸಭೆಗೆ ತಪ್ಪದೇ ಹಾಜರಾಗಲು ತಿಳಿಸಲು ವಾರ್ಡ್‌ನ ಸಹಾಯಕ ಅಭಿಯಂತರರು ರವರಿಗೆ ತಿಳಿಸಲಾಯಿತು.
12. ಮಾಗಡಿ ಮುಖ್ಯರಸ್ತೆ, ಹೆಚ್.ವಿ.ಆರ್ ಬಡಾವಣೆಯಿಂದ ಸುಮ್ಮನಹಳ್ಳಿ ಸೇತುವೆ ವರೆಗು ಬಿ.ಡಬ್ಲ್ಯೂ.ಎಸ್.ಎಸ್.ಬಿ ಯೋಜನೆಯವರು ರಸ್ತೆ ಕಾಮಗಾರಿ ಸಮಯದಲ್ಲಿ ತೆಗೆದಿರುವ ಮಣ್ಣಿನ ರಾಶಿಯನ್ನು ರಸ್ತೆಯಲ್ಲಿ ಬಿಟ್ಟಿರುವುದರಿಂದ ಸದರಿ ರಸ್ತೆಯಲ್ಲಿ ವಾಹನಗಳ ಮತ್ತು ಸಾರ್ವಜನಿಕರು ಓಡಾಡಲು ಅಡಚಣೆ ಉಂಟಾಗುತ್ತಿರುವುದರಿಂದ ಕೂಡಲೇ ಮಣ್ಣಿನ ರಾಶಿಯನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲು ವಾರ್ಡ್‌ನ ಸಹಾಯಕ ಅಭಿಯಂತರರು ರವರಿಗೆ ತಿಳಿಸಲಾಯಿತು.
13. ವಾರ್ಡ್–103 ಕಾವೇರಿಪುರ ಪ್ರದೇಶದಲ್ಲಿ ಸಿ.ಸಿ.ಕ್ಯಾಮರಗಳನ್ನು ಅಳವಡಿಸಲಾಗಿದ್ದು, ಸದರಿ ಕ್ಯಾಮರಗಳು ಕಾರ್ಯನಿರ್ವಹಿಸದೆ ಇರುವುದರಿಂದ ವಾರ್ಡ್‌ನ ಪ್ರಮುಖ ಪ್ರದೇಶಗಳಲ್ಲಿ ನಿಗಾವಹಿಸಲು ಆಗದೆ ಇರುವುದರಿಂದ ಕೂಡಲೇ ಸಂಬಂಧಪಟ್ಟವರಿಗೆ ತಿಳಿಸಿ ಸರಿಪಡಿಸಲು ವಾರ್ಡ್‌ನ ಸಹಾಯಕ ಅಭಿಯಂತರರು ರವರಿಗೆ ತಿಳಿಸಲಾಯಿತು.
14. ವಾರ್ಡ್–103 ಕಾವೇರಿಪರ ಪ್ರದೇಶದಲ್ಲಿನ ರಸ್ತೆಯಲ್ಲಿರುವ ಮ್ಯಾನ್‌ಹೋಲ್‌ಗಳು ರಸ್ತೆ ಮಟ್ಟಕ್ಕಿಂತ ಕೆಳಗಡೆ ಇರುವುದನ್ನು ರಸ್ತೆ ಮಟ್ಟಕ್ಕೆ ಏರಿಸಲು ಈಗಾಗಲೇ ಹಿಂದಿನ ಸಭೆಯಲ್ಲಿ ತಿಳಿಸಿದ್ದರೂ ಸಹ ಬಿ.ಡಬ್ಲ್ಯೂ.ಎಸ್‌ಎಸ್‌ಬಿ ಅಧಿಕಾರಿಗಳು ಈ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. 15 ದಿವಸಗಳೊಳಗಾಗಿ ರಸ್ತೆಯಲ್ಲಿರುವ ಮ್ಯಾನ್‌ಹೋಲ್‌ಗಳನ್ನು ರಸ್ತೆಯ ಮಟ್ಟಕ್ಕೆ ಏರಿಸಲು ಕ್ರಮವಹಿಸುತ್ತೇವೆ ಎಂದು ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯ ಸಹಾಯಕ ಅಭಿಯಂತರರು ತಿಳಿಸಿದ್ದು, ಮುಂದಿನ ಸಭೆಯೊಳಗಾಗಿ ಸದರಿ ಕಾರ್ಯವನ್ನು ಪೂರ್ಣಗೊಳಿಸಲು ಸಭೆಯಲ್ಲಿ ತಿಳಿಸಲಾಯಿತು.

ಶ್ರೀ.ರೇಣುಕಾಪ್ರಸಾದ್. ಸಿ
ಕಾರ್ಯದರ್ಶಿ

(ಶ್ರೀ.ಆಲೋಕ್ ಶೆಟ್ಟಿ)
ವಾರ್ಡ್–103 ಕಾವೇರಿಪುರ, ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner